ವಿಪರೀತವಾಗಿ ಹೆಚ್ಚಾಗುತ್ತಿವೆ. ಮಾನ್ಯ ಸಿಂಧ್ಯಾರವರು ಕೂಡ ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಇದರ ಬಗ್ಗೆ ನಾನು ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರೊಂದಿಗೆ ಮಾತನಾಡಿದ್ದೇನೆ. ಈ ಕಾರ್ಯಕ್ರಮಕ್ಕಾಗಿ ಮದ್ರಾಸಿನಲ್ಲಿ 19 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನಾವು ಒಂದು ಪೈಸೆ ಕೂಡ ಇಟ್ಟಿರುವುದಿಲ್ಲ. ಕೇಳಿದಾಗ ಅಡ್‌ಹಾಕ್ ಮೇಲೆ ಹಣವನ್ನು ಕೊಟ್ಟಿದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಬಜೆಟ್‌ನಲ್ಲಿ ಮಾತ್ರ ಹಣವನ್ನು ಇಟ್ಟಿರುವುದಿಲ್ಲ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಉದ್ಯೋಗ ಭರವಸೆ ಯೋಜನೆಯಲ್ಲಿ ಒದಗಿಸಿದ ಹಣ

27(290) **ಶ್ರೀ ಗೋಪಾಲ ಬಂಡಾರಿ ಹೆಚ್ (ಕಾರ್ಕಳ):** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಳೆದ 3 ವರ್ಷಗಳಿಂದ ಉದ್ಯೋಗ ಭರವಸೆ ಯೋಜನೆಯಲ್ಲಿ ಒದಗಿಸಿದ ಹಣ ಮತ್ತು ಬಿಡುಗಡೆಯಾದ ಹಣ ಎಷ್ಟು (ವಿವರ ಒದಗಿಸುವುದು);

ಆ) ಇತ್ತೀಚಿನ ವರುಷಗಳಲ್ಲಿ ಒದಗಿಸಿದ ಮತ್ತು ಬಿಡುಗಡೆಯಾದ ಹಣ ಕಡಿಮೆಯಾಗಿದ್ದರೆ ಕಾರಣವೇನು?

ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಉದ್ಯೋಗ ಭರವಸೆ ಯೋಜನೆಯಲ್ಲಿ ಒದಗಿಸಿದ ಹಣ ಮತ್ತು ಬಿಡುಗಡೆಯಾದ ಹಣ ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

ಜಿಲ್ಲೆ	1997-98		1998-99		1999-2000	
	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ
1. ದ. ಕನ್ನಡ	-	775.00	-	475.00	206.96	205.14
2. ಉಡುಪಿ	-	-	-	300.00	171.40	151.05

ಆ) ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ವರ್ಷಾವಾರು ಅನುದಾನವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿ ಬಿಡುಗಡೆ ಮಾಡುತ್ತದೆ.

ಶ್ರೀ ಹೆಚ್. ಗೋಪಾಲ ಬಂಡಾರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆಯಲ್ಲಿ ಉದ್ಯೋಗ ಭರವಸೆ ಯೋಜನೆಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿದ ಹಣ, ಬಿಡುಗಡೆಯಾದ ಹಣದ ಬಗ್ಗೆ ಮಾಹಿತಿಯನ್ನು ನಾನು ಕೇಳಿರುತ್ತೇನೆ. ಅವರು ಇಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ 1998-99ನೇ ಸಾಲಿನಲ್ಲಿ

ಮೂರು ಕೋಟಿ ರೂಪಾಯಿಗಳನ್ನು ಉಡುಪಿ ಜಿಲ್ಲೆಗೆ ಒದಗಿಸಲಾಗಿದೆ. ಅದರ ನಂತರದ ಆರ್ಥಿಕ ವರ್ಷದಲ್ಲಿ 171 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಉತ್ತರದಲ್ಲಿ ಇರುವ ಪ್ರಕಾರ ಕಳೆದ ಆರ್ಥಿಕ ವರ್ಷದಲ್ಲಿ ಹಣ ಒದಗಿಸಿದ್ದು 70 ಲಕ್ಷ ರೂಪಾಯಿಗಳು. ಪ್ರತಿವರ್ಷ ಶೇಕಡಾ 50 ರಷ್ಟು ಅನುದಾನವನ್ನು ಕಡಿತ ಮಾಡಿಕೊಂಡು ಬಂದಿರುತ್ತಾರೆ. ಉದ್ಯೋಗ ಭರವಸೆ ಯೋಜನೆಯಲ್ಲಿ ಅನುದಾನ ಬಿಡುಗಡೆ ಮಾಡುವಲ್ಲಿ ಕಡಿಮೆ ಮಾಡುವುದಕ್ಕೆ ಕಾರಣವೇನು ಎಂದು ನಾನು ಕೇಳಿರುವ ಪ್ರಶ್ನೆಗೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದೇನೆಂದರೆ, ಇದು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿದ್ದು, ಪರ್ಸೆಂಟೇಜ್ ನಿಗದಿ ಮಾಡಿ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಈ ಯೋಜನೆಯ ಮೂಲ ಉದ್ದೇಶ ವರ್ಷದಲ್ಲಿ 100 ದಿವಸ ಗ್ರಾಮೀಣ ಪ್ರದೇಶದ ಕೃಷಿ ಕಾರ್ಮಿಕರಿಗೆ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಡುವ ಕಾರ್ಯಕ್ರಮವಾಗಬೇಕು. ಒಂದು ಅಸೆಟ್ ಕ್ರಿಯೇಟ್ ಮಾಡತಕ್ಕಂಥ ಕೆಲಸ ಗ್ರಾಮೀಣ ಪ್ರದೇಶಗಳಲ್ಲಿ ಆಗಬೇಕು ಎನ್ನುವುದು ಮೂಲ ಉದ್ದೇಶ. ಗ್ರಾಮೀಣ ಪ್ರದೇಶದಲ್ಲಿ ಇಂದಿರಾ ಆವಾಜ್ ಯೋಜನೆಯ ಮನೆಗಳನ್ನು ಕೂಡ ಇದೆ ಯೋಜನೆಯಲ್ಲಿಯೇ ತೆಗೆದುಕೊಳ್ಳುತ್ತಾರೆ. ಇಂದಿರಾ ಆವಾಜ್ ಯೋಜನೆಯ ಮನೆಗಳು ಮಂಜೂರಾಗಿವೆ, ಆದರೆ ಹಣ ಬಿಡುಗಡೆಯಾಗುತ್ತಿಲ್ಲ. ಕೇಂದ್ರ ಸರ್ಕಾರದವರು ವರ್ಷದಿಂದ ವರ್ಷಕ್ಕೆ ಹಣವನ್ನು ಕಡಿಮೆ ಮಾಡುತ್ತಾ ಬಂದಿದ್ದಾರೆಂದಾದರೆ, ಬಹುಶಃ 100 ದಿವಸಗಳ ಕೆಲಸವನ್ನು ಕೊಡುವುದಕ್ಕಾಗುವುದಿಲ್ಲ. ಶೇಕಡಾ 50 ರಷ್ಟು ಸಹ ಉದ್ಯೋಗವನ್ನು ಕೊಡುವುದಕ್ಕಾಗುವುದಿಲ್ಲ, ಅದಕ್ಕಾಗಿ ಸರ್ಕಾರದವರು ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಈ ಸ್ಕೀಂನಲ್ಲಿ ಹಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬರುವುದು ನಿಜ. ನನ್ನನ್ನು ಕೇಳಿದರೆ ಇದೊಂದು ದುರ್ದೈವದ ಸಂಗತಿ, ಅದು ಆಗಬಾರದಾಗಿತ್ತು, ಆದರೆ ಆಗುತ್ತಿದೆ. ಇದಕ್ಕೆ ಹಲವಾರು ಕಾರಣಗಳು ಇವೆ. ಈ ಕಾರ್ಯಕ್ರಮದ ಬಗ್ಗೆ ನಾನು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲೇಬೇಕಾಗುತ್ತದೆ. 2ನೇ ಅಕ್ಟೋಬರ್ 1993ರಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಯಿತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೇನೆಂದರೆ, ಗ್ರಾಮೀಣ ಪ್ರದೇಶದಲ್ಲಿ ಅಸೆಟ್ ಬಿಲ್ಡ್ ಅಪ್ ಮಾಡುವುದಕ್ಕೆ ಮತ್ತು ಉದ್ಯೋಗವನ್ನು ಕೊಡುವುದಕ್ಕೆ ಎಷ್ಟು ಹಣದ ಅವಶ್ಯಕತೆ ಇದೆ ಅಷ್ಟನ್ನು ಬಿಡುಗಡೆ ಮಾಡಬೇಕು ಎಂಬುದು ಆ ಕಾಲದ ಸರ್ಕಾರದ ಉದ್ದೇಶವಾಗಿತ್ತು. ಕ್ರಮೇಣ ಅದರ ಪ್ರಕಾರವಾಗಿ ಆಗುತ್ತಿಲ್ಲವೆನ್ನುವುದು ಕೂಡ ನಿಜ. ಇದರಲ್ಲಿ 75 ಪರ್ಸೆಂಟ್ ಕೇಂದ್ರ ಸರ್ಕಾರದ್ದು, 25 ಪರ್ಸೆಂಟ್ ರಾಜ್ಯ ಸರ್ಕಾರದ್ದು ಇರುತ್ತದೆ. ಮುಖ್ಯವಾಗಿ ಇದು ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮವೆಂದು ಹೇಳಬಹುದು.

ಇದು ಕ್ರಮೇಣ ಕಡಿಮೆಯಾಗುವುದಕ್ಕೆ ಕಾರಣ ಏನೆಂದರೆ, ಕೆಲವು ಬ್ಲಾಕ್‌ಗಳಿಗೆ ಮಾತ್ರ ಮೊದಲು ಇತ್ತು, ಈಗ ಎಲ್ಲಾ ಬ್ಲಾಕುಗಳಿಗೆ ಅನುಸರಿಸುತ್ತಿದ್ದಾರೆ. ಕಾರ್ಯಕ್ರಮಗಳ ಅಡಿಯಲ್ಲಿ ಕೇಂದ್ರ ಸರ್ಕಾರದವರು ಕಡಿಮೆ ಹಣ ಕೊಡುತ್ತಾ ಬಂದಿದ್ದಾರೆ. ಅವರು ಕಡಿಮೆ ಹಣ ಕೊಟ್ಟರು ಅಂದರೆ ಇಲ್ಲಿ ನಮ್ಮ ರಾಜ್ಯದಲ್ಲಿ ಹಣ ಕಡಿಮೆ ಹಂಚಿಕೆಯಾಗುತ್ತದೆ. ಹೋದವರ್ಷ ನಮ್ಮ ಕರ್ನಾಟಕದ ಅಲೋಕೇಷನ್ 103 ಕೋಟಿ ರೂಪಾಯಿ ಇತ್ತು. ಹೋದ ವರ್ಷ ನಾವು

100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ಕರ್ನಾಟಕದ ಅಲೋಕೇಷನ್ 73 ಕೋಟಿ ರೂಪಾಯಿ ಇದೆ. ಅಂದರೆ 54 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರಬೇಕಾದುದು, 18 ಕೋಟಿ ರೂಪಾಯಿ ನಮ್ಮದು. 54 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರಬೇಕಾಗಿತ್ತು. ಅದರಲ್ಲಿ 20 ಪರ್ಸೆಂಟ್ ಅಂದರೆ 12 ಕೋಟಿ ರೂಪಾಯಿಗಳನ್ನು ಹಿಡಿದು ಇಟ್ಟಿದ್ದಾರೆ. ಅದನ್ನು ಬಿಡುಗಡೆ ಮಾಡಲಿಲ್ಲ. ಕಾರಣ ಏನೆಂದರೆ, ನಾವು ಕರ್ನಾಟಕದಲ್ಲಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು 20 ತಿಂಗಳು ಅಧಿಕಾರ ನಡೆಸಬೇಕೆನ್ನುವ ರೊಟೇಶನ್ ಮಾಡಬೇಕೆಂದು ಕಾನೂನು ಏನಿದೆ ಅದು ಸಂವಿಧಾನಕ್ಕೆ ವಿರೋಧವಾಗಿರುವುದರಿಂದ 20 ಪರ್ಸೆಂಟ್ ಕೊಡುವುದನ್ನು ನಿಲ್ಲಿಸಿದರು. ನಾನು ಸ್ವತಹ ದೆಹಲಿಗೆ ಹೋಗಿ ಹೇಳಿದ್ದೇನೆ. ನಿಮ್ಮ ಅಧಿಕಾರಿಗಳು ಏನು ಬರೆದುಕೊಂಡಿದ್ದಾರೆ ಅದು ಸರಿಯಲ್ಲ. ನಮ್ಮ ಹೈಕೋರ್ಟ್‌ನಲ್ಲಿ ಅದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ. ರೊಟೇಶನ್ 20 ತಿಂಗಳು, 10 ತಿಂಗಳು ಅದು ಎಷ್ಟೇ ತಿಂಗಳು ಆಗಲಿ ಅದು ಕಾನೂನಿಗೆ ವಿರೋಧವಾಗಿಲ್ಲ. ಒಂದು ಸಲ ಆರಿಸಿ ಬಂದ ನಂತರ ಐದು ವರ್ಷ ಅವರು ಸದಸ್ಯರಾಗಿರಬೇಕು. ಐದು ವರ್ಷ ಅಧಿಕಾರ ಸ್ಥಾನದಲ್ಲಿರಬೇಕೆಂದು ಎಲ್ಲೂ ಇಲ್ಲ. ಹೈಕೋರ್ಟ್‌ನವರು ಕೊಟ್ಟಿರತಕ್ಕ ಸ್ಪಷ್ಟೀಕರಣವನ್ನು ಕಳುಹಿಸಿಕೊಟ್ಟು ಆದಮೇಲೆ ಸುದೈವದಿಂದ 24ನೇ ತಾರೀಖು 12 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದು ಒಳ್ಳೆಯ ಉದಾಹರಣೆ ಇದೆ. ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡುವಾಗ ಏನೇನು ಅಡ್ಡ ಬರಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ತಾವು ಗಮನಿಸಬೇಕು. ನನಗನಿಸುತ್ತದೆ ನಿಮ್ಮ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಏಕೆಂದರೆ ನಾವು ಸಭೆಯ ಮುಖಾಂತರ ಕೇಂದ್ರ ಸರ್ಕಾರಕ್ಕೆ ಹೇಳಬೇಕು. ಅತಿ ಮುಖ್ಯವಾದ ಕಾರ್ಯಕ್ರಮ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಜಾಸ್ತಿ ಮಾಡುತ್ತಾ ಹೋಗಬೇಕು. ನಿಮ್ಮ ಹಣದ ಅಭಾವದಿಂದ ಕಾರ್ಯಕ್ರಮವನ್ನು ಕಡಿಮೆ ಮಾಡುತ್ತಾ ಹೋಗುವುದು ಸರಿಯಲ್ಲ. ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ನಾನು ಸಮ್ಮತಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯ ವತಿಯಿಂದ ಈಗಾಗಲೇ ಧಾನ್ಯ ಸಂಗ್ರಹಣೆಯನ್ನು ಮಾಡಿದೆ. ಧಾನ್ಯವನ್ನು ನಿಮಗೆ ಕೊಡುವುದು ಇದ್ದರೆ ಈಗಿನ ಟಾರ್ಗೆಟ್‌ಗಿಂತ ಎರಡು ಪಟ್ಟು ಕೊಡುತ್ತೇವೆಂದು ಕೇಂದ್ರ ಸರ್ಕಾರ ಎಲ್ಲ ರಾಜ್ಯ ಸರ್ಕಾರಗಳಿಗೆ ತಿಳಿಸಿದೆ ಎನ್ನುವುದು ಸರಿಯಾಗಿ ನಿಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ತಮ್ಮ ಸರ್ಕಾರ ಅದನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಿದೆಯೇ?

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, "ಫುಡ್ ಫಾರ್ ವರ್ಕ್" ಎಂದು ಇತ್ತೀಚೆಗೆ ಕರ್ನಾಟಕದಲ್ಲಿ ಒತ್ತಾಯ ಮಾಡಿದ್ದೇವೆ. ಫುಡ್ ಫಾರ್ ವರ್ಕ್ ಎಂದು ಏಕೆ ಮಾಡಬಾರದೆಂದು ಪ್ರಧಾನಮಂತ್ರಿಗಳು ಸಡಕ್ ಯೋಜನೆಯನ್ನು ಉದ್ಘಾಟನೆ ಮಾಡುವ ಕಾಲಕ್ಕೆ ಬಹಿರಂಗವಾಗಿ ನಾನೇ ಈ ಮಾತನ್ನು ಹೇಳಿದೆ. ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಹೇಳಿದೆ. ಬೇಕಾದಷ್ಟು ಧಾನ್ಯವಿರುವುದರಿಂದ ಫುಡ್ ಫಾರ್ ವರ್ಕ್ ಮೇಲೆ ಬಹಳ ಅನುಕೂಲವಾದಂತಹ ಸನ್ನಿವೇಶವಿದೆ, ಮಾಡಿಯೆಂದು ಹೇಳಿದ್ದೇನೆ. ಕೆಲವು ದಿವಸಗಳ ಹಿಂದೆ

ಕೇಂದ್ರದ ಮಂತ್ರಿಗಳು ಫುಡ್ ಫಾರ್ ವರ್ಕ್ ಖಂಡಿತವಾಗಿಯೂ ಮಾಡುತ್ತೇವೆಂದು ನಮಗೂ ಬರೆದಿದ್ದಾರೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಅನುದಾನ ಬಿಡುಗಡೆಯಾಗುವಲ್ಲಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಅದಕ್ಕೆ ಸಕಾರಣ ಇಲ್ಲದೆ ಅನುದಾನ ಬಿಡುಗಡೆ ಮಾಡಲಿಲ್ಲವೆನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರ ಉತ್ತರದಿಂದ ನನಗೆ ಸಮಾಧಾನವಾಗಿದೆ. ಕೇಂದ್ರ ಸರ್ಕಾರಕ್ಕೆ ನಾವು ಏನಾದರೂ ಒಂದು ಒತ್ತಾಯವನ್ನು ಹಾಕಲೇಬೇಕಾಗಿದೆ. ಏಕೆಂದರೆ ಈ ಯೋಜನೆ ರಾಜ್ಯದಲ್ಲಿ ಅತ್ಯಂತ ಪ್ರಾಮುಖ್ಯವಾಗಿದೆ. ನೂರು ದಿನ ಉದ್ಯೋಗ ಕೊಡಲಿಕ್ಕೆ ಕೇಂದ್ರ ಸರ್ಕಾರ ಈ ರೀತಿ ಸಣ್ಣಪುಟ್ಟ ಕಾರಣಗಳನ್ನು ಹೇಳಿ ರಾಜ್ಯದ ಜನರಿಗೆ ತೊಂದರೆಯಾಗಿದೆ. ಇಷ್ಟು ಮಾತ್ರವಲ್ಲ, ಅತ್ಯಂತ ಕಡು ಬಡವರಿಗೆ ಇಂದಿರಾ ಆವಾಜ್ ಯೋಜನೆಯಲ್ಲಿ ಮನೆ ಮಂಜೂರು ಮಾಡಲಾಗಿದೆ. ಸಾಕಷ್ಟು ಮನೆಗಳನ್ನು ಬಡವರು ಕಟ್ಟಿಕೊಂಡಿದ್ದಾರೆ. ಕೆಲವು ಮನೆಗಳು ಪಂಚಾಂಗದ ಹಂತದಲ್ಲಿವೆ, ಕೆಲವು ಗೋಡೆ ಹಂತದಲ್ಲಿವೆ, ಮಳೆ ಬಂದರೆ ಅವುಗಳೆಲ್ಲ ಬೀಳುವ ಪ್ರಸಂಗ ಬರುತ್ತದೆ, ಅಂತಹ ಆಪಾಯದ ಅಂಚಿನಲ್ಲಿವೆ. ಈ ಸದನದ ಮುಖೇನ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು, ಸಂಪೂರ್ಣ ನೂರು ದಿನಗಳ ಕಾಲ ಉದ್ಯೋಗ ಖಾತರಿಯನ್ನು ಒದಗಿಸಬೇಕೆನ್ನುವ ವಿನಂತಿಯನ್ನು ಕೇಂದ್ರ ಸರ್ಕಾರದವರಿಗೆ ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಎನ್. ಯೋಗೀಶ್‌ಭಟ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಕೆಲವೊಂದು ದೋಷಗಳು ಬರುತ್ತಿವೆ. ಕೇಂದ್ರ ಸರ್ಕಾರ ನಮಗೆ ಎಷ್ಟು ಹಣ ಮಂಜೂರು ಮಾಡಿದೆ ಅದನ್ನು ಸರಿಯಾಗಿ ಯುಟಿಲೈಸ್ ಮಾಡಲಾಗಿದೆ ಎನ್ನುವಂತಹ ಯುಟಿಲೈಸೇಷನ್ ಸರ್ಟಿಫಿಕೇಟ್ ನಮ್ಮ ರಾಜ್ಯದ ಕಡೆಯಿಂದ ಕೇಂದ್ರ ಸರ್ಕಾರಕ್ಕೆ ಹೋಗದ ಕಾರಣದಿಂದ ಅನೇಕ ಸಂದರ್ಭದಲ್ಲಿ ಮುಂದೆ ಬಿಡುಗಡೆಯಾಗಬೇಕಾದಂತಹ ಕಂತುಗಳನ್ನು ತಡೆಹಿಡಿಯುವಂತಹದ್ದು ಆಗುತ್ತಿದೆ. ಆ ನಿಟ್ಟಿನಲ್ಲಿ ಕೂಡ ರಾಜ್ಯ ಸರ್ಕಾರದ ಕುಂದುಕೊರತೆಗಳನ್ನು ನಾನು ಎತ್ತಿ ತೋರಿಸುತ್ತಿದ್ದೇನೆ. ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆಯಲ್ಲಿ ಹಲವು ಕೋಟಿ ರೂಪಾಯಿ ನಮಗೆ ಬಿಡುಗಡೆಯಾಗಿದ್ದರೂ ನಾವು ಖರ್ಚು ಮಾಡುವುದಕ್ಕೆ ಆಗಿಲ್ಲ. ಈ ಬಗ್ಗೆ ಕೂಡ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಅಂಕಿ ಸಂಖ್ಯೆಗಳನ್ನು ಕೊಟ್ಟೆ, ಹೋದವರ್ಷ 1999-2000 ದಲ್ಲಿ ನಮಗೆ ಅಲೋಕೇಷನ್ 103 ಕೋಟಿ ರೂಪಾಯಿ ಬಂದಿತ್ತು. ಅದರಲ್ಲಿ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹೋದ ವರ್ಷ ಸರ್ಟಿಫಿಕೇಟ್ ಪ್ರಶ್ನೆ ಬರುವುದಿಲ್ಲ. ಖರ್ಚು ಮಾಡಲಿಲ್ಲವೆನ್ನುವ ಪ್ರಶ್ನೆ ಬರುವುದಿಲ್ಲ. ಆದರೂ ಕೂಡ ಈ ವರ್ಷ ಅಲೋಕೇಷನ್ 73 ಕೋಟಿ ರೂಪಾಯಿಯಾಗಿದೆ. ಕಾರಣ ಏನೆಂದರೆ, ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೆ ಕೊಡುವ ಹಣ ಕಡಿಮೆಯಾಗುತ್ತಿದೆ. 1997-98 ರಲ್ಲಿ ಅಲೋಕೇಷನ್ 180 ಕೋಟಿ ರೂಪಾಯಿ ಇತ್ತು. ಇವತ್ತು ನೂರು ಕೋಟಿಗೆ ಬಂದಿದೆ. ಅದು ಈ ವರ್ಷ 73 ಕೋಟಿಗೆ ಬಂದಿದೆ. ಅಲೋಕೇಷನ್ ಕಡಿಮೆಯಾಗುತ್ತಿರುವ ಟ್ರೆಂಡ್ ಏನಿದೆ ಇದು ಸರಿಯಲ್ಲ. ಸಾಧ್ಯವಾದಷ್ಟು ಹೆಚ್ಚಿಗೆ ಕೇಂದ್ರ ಸರ್ಕಾರ ಕೊಡಬೇಕೆಂದು

ನಮ್ಮೆಲ್ಲರ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಏನು ತೊಂದರೆಯಿಲ್ಲ. ಹಾಗೆಯೇ ಮಾಡೋಣವೇಕೆಂದು ನಾನು ಸೂಚಿಸುತ್ತಿದ್ದೇನೆ.

ಅಧ್ಯಕ್ಷರು: ಮುಂದಿನ ಎರಡು ಪ್ರಶ್ನೆಗಳನ್ನು ಮುಂದಿನ ಶನಿವಾರದೊಳಗೆ ತೆಗೆದುಕೊಳ್ಳುತ್ತೇನೆ. ಈಗಾಗಲೇ ಪ್ರಶ್ನೋತ್ತರ ವೇಳೆ ಶುರುವಾಗಿ ಒಂದು ಗಂಟೆ 20 ನಿಮಿಷಗಳಾಗಿದೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ(i): ವಿರೋಧ ಪಕ್ಷದ ಸದಸ್ಯರುಗಳಿಗೆ ಬಜೆಟ್ ಭಾಷಣದ ಮೇಲೆ ಮಾತನಾಡಲು ಹೆಚ್ಚಿನ ಸಮಯ ನಿಗದಿ ಮಾಡುವ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ವಿರೋಧಪಕ್ಷದ ಉಪ ನಾಯಕರು): ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ. ಎಲ್ಲ ವಿಪಕ್ಷಗಳವರ ಪರವಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ತಾವು ಈಗಾಗಲೇ ನಾವು ಮಾತನಾಡಲಿಕ್ಕೆ ಸಮಯವನ್ನು ನಿಗದಿಮಾಡಿ ಪತ್ರವನ್ನು ಕಳುಹಿಸಿಕೊಟ್ಟಿದ್ದೀರಿ.

Mr. Speaker: This is my proposal

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಆ ಪ್ರಪೋಸಲ್ಸ್ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಈಗ ನಮ್ಮಲ್ಲಿ ಹೇಳಲಿಕ್ಕೆ ಇಷ್ಟಪಡುವುದೇನೆಂದರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನಾವು ಮಾತನಾಡಲಿಕ್ಕೆ ಕಾಲಾವಕಾಶ ಸಿಕ್ಕಿದ್ದು ಬಹಳ ಕಡಿಮೆ. ಕೇವಲ ಮೂರು ಗಂಟೆಗಳ ಕಾಲ ಚರ್ಚೆಯಾಗಿದೆ. ಅದು ತಮ್ಮ ಗಮನಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ಮಾತನಾಡಬೇಕೆಂದು ತಾವೂ ಕೂಡ ಹೇಳಿದ್ದೀರಿ. ನಾವು ಮಾತನಾಡಲಿಕ್ಕೆ ಅವಕಾಶ ಕಡಿಮೆಯಿತ್ತು ಎನ್ನುವುದು ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ನಿಮ್ಮ ಮನಸ್ಸಿನಲ್ಲಿರುವ ವಿಚಾರವನ್ನು ಹೇಳಿದ್ದೀರಿ. ನಾವು ಒಪ್ಪಿಕೊಂಡಿದ್ದೇವೆ, ಅದರ ಪ್ರಕಾರ ನಡೆದುಕೊಂಡಿದ್ದೇವೆ. ರಾಜ್ಯಪಾಲರ ಭಾಷಣ ಆದಮೇಲೆ ಈಗ ಬಜೆಟ್ ಭಾಷಣ ಬಂತು. ಇದು ಅತ್ಯಂತ ಪ್ರಾಮುಖ್ಯವಾದ ವಿಚಾರ. ಈಗಾಗಲೇ ಮೂರು ಗಂಟೆಗಳ ಕಾಲ ಚರ್ಚೆಯಾಗಿದೆ. ನಾನು ಒಂದು ಗಂಟೆ, ಮಾನ್ಯ ಎಸ್.ಎಸ್. ಪಾಟೀಲರು ಒಂದು ಗಂಟೆ, ರಾಮಯ್ಯನವರು ಒಂದು ಗಂಟೆ ಸಮಯವನ್ನು ಹಂಚಿಕೊಂಡಿದ್ದೇವೆ. ಈಗ ತಾವೊಂದು ಪ್ರಪೋಸಲ್ಸ್ ನಮಗೆ ಕಳುಹಿಸಿಕೊಟ್ಟಿದ್ದೀರಿ. ಆಡಳಿತ ಪಕ್ಷದವರಿಗೆ ಸುಮಾರು ನಾಲ್ಕು ಗಂಟೆ ಕಾಲ. ಭಾರತೀಯ ಜನತಾ ಪಕ್ಷದವರಿಗೆ ಎರಡೂವರೆ ಗಂಟೆ ಕಾಲ. ಜೆ.ಡಿ.ಯುಗೆ ಎರಡು ಗಂಟೆ, ಜೆ.ಡಿ.ಎಸ್‌ಗೆ ಅರ್ಧಗಂಟೆ, ಮತ್ತು ಪಕ್ಷೇತರರಿಗೆ ಎರಡು ಗಂಟೆಯೆಂದು ಸಮಯ ನಿಗದಿ ಮಾಡಿದ್ದೀರಿ. ನನ್ನ ವಿನಂತಿ ಏನೆಂದರೆ, ಬಜೆಟ್ ಭಾಷಣವಿರಲಿ ಏನೇ ಇರಲಿ ಕೂಲಂಕಷವಾದ ಸಲಹೆ ಸೂಚನೆಗಳನ್ನು ಕೊಡುವಂತಹ ಹೆಚ್ಚಿನ ಜವಾಬ್ದಾರಿ ವಿಪಕ್ಷಕ್ಕೆ ಸೇರಿದವರಿಗೆ ಇರುತ್ತದೆ. ನಾನು ಕೆಲವು ಬಜೆಟ್‌ಗಳನ್ನು ಕಂಡಿದ್ದೇನೆ. ನಾನು ಯಾವುದೇ ರೀತಿಯ ಆಪಾದನೆಯನ್ನು ಮಾಡುತ್ತಿಲ್ಲ.